▸ **ನಿಮ್ಮ ಇಲ್ಲಿಯ ತನಕದ ಕವಿತೆಗಳ ಸಂಕಲನ 'ನೆಲದ ಬೇರು ನಭದ ಬಿಳಲು'ಗೆ ಮೊದಲು ಕುಮಾರವ್ಯಾಸನ ಕೆಲವು ಸಾಲುಗಳನ್ನ ಹಾಕಿದ್ದೀರಿ. ಈ ಸಾಲುಗಳು ಗದುಗಿನ ಭಾರತದ ಭೀಷ್ಮ ಪರ್ವದ ಸಾಲುಗಳು. ಇದೇ ಸಾಲುಗಳನ್ನ ಏಕೆ ಇಲ್ಲಿ ಹಾಕಿದ್ದೀರಿ ಎನ್ನುವುದನ್ನು ಹೇಳುತ್ತೀರಾ?**

ನನಗೆ ಕುಮಾರವ್ಯಾಸ ಬಹಳ ಇಷ್ಟ. ನನ್ನ ದೃಷ್ಟಿಯಲ್ಲಿ ಕನ್ನಡದ ಒಬ್ಬನೇ ಕವಿಯನ್ನ ನೀವು ಆಯ್ಕೆ ಮಾಡಬೇಕು ಅಂದರೆ ಅದು ಕುಮಾರವ್ಯಾಸ. ಅಲ್ಲಮಪ್ರಭುವೂ ಇದ್ದಾನೆ. ಅವನು ದೊಡ್ಡ ಮನುಷ್ಯ. ಆದರೆ, ಅವನು ಬರೀ ಕವಿಯೆಂದು ಹೇಳಲಿಕ್ಕೆ ಬರೋದಿಲ್ಲ. ಪಂಪ ಇದ್ದಾನೆ; ಅವನನ್ನು ನಾನು ಓದಿಲ್ಲ. ಕುಮಾರವ್ಯಾಸ ನನ್ನ ದೃಷ್ಟಿಯಲ್ಲಿ ಒಬ್ಬ ನಿಜವಾದ ಕವಿ. ಕೋಟ್ ಮಾಡಿರುವ ಸಾಲುಗಳಿವೆಯಲ್ಲ, ಅವು ನಾನು ನೋಡುವ ಕ್ರಮಕ್ಕೆ ಚೆನ್ನಾಗಿ ಹೊಂದುಕೊಳ್ಳುತ್ತವೆ. ಮಹಾಭಾರತ ಯುದ್ಧ ನಡೆಯುವ ಮೊದಲು ಸೇನೆಯ ಮುಖ್ಯಸ್ಥ ಭೀಷ್ಮ ದುರ್ಯೋಧನನಿಗೆ ಎದುರು ಪಕ್ಷದ ನಾಯಕರನ್ನ ಪರಿಚಯಿಸಿಕೊಡುತ್ತಾನೆ. ಅವನು ಅರ್ಜುನನ್ನು ಪರಿಚಯಿಸಿ 'ಜಯೇಯೋತಿವಿಟಾ' ಎನ್ನುತ್ತಾನೆ. ಭೀಮನನ್ನ ತೋರಿಸಿ, 'ಇತ್ತಲಿದು ಕಲ್ಪಾಂತಾರುದ್ರನ ಮೊತ್ತ' ಎನ್ನುತ್ತಾನೆ. ಆಮೇಲೆ ಕೃಷ್ಣನನ್ನ ತೋರಿಸಿ ಅವನು 'ತಿಳಿಯಲೊಬ್ಬನ ರೋಮರೋಮದ/ ಕುಳಿಯೊಳಗೆ ಬ್ರಹ್ಮಾಂಡಕೋಟಿಯ/ ಸುಳಿವು ಗಡ' ಎನ್ನುತ್ತಾನೆ. ಅಂದರೆ, ಅವನು ಅಷ್ಟು ಸಣ್ಣಗಿದ್ದಾನೆ, ಸೂಕ್ಷ್ಮವಾಗಿದ್ದಾನೆ, ರೋಮ ರೋಮದ ಕುಳಿಯೊಳಗೂ ಇದ್ದಾನೆ, ಬ್ರಹ್ಮಾಂಡ ಕೋಟಿಯಲ್ಲೂ ಇದ್ದಾನೆ ಎನ್ನುತ್ತಾನೆ.

'ಶೃತಿನಿಖರವೊರಲಿದರೊಳಗುದೋರ ಗಡ' ಎಂದರೆ ಎಂಥ ಶಾಸ್ತ್ರ, ವೇದ, ಪುರಾಣ ಹೇಳಿದರೂ ಅವನು ತನ್ನ ಒಳಗನ್ನು ತೋರಿಸುವುದಿಲ್ಲ. 'ಹಲವು ಮಾತೇನಾತನೀತನ/ ಬಳಿಯ ಬಂಡಿಯ ಬೋವನಾಗಿಯೆ/ ಸುಳಿವಾತನ ನೋಡು ಮಗನೇ ವೀರನರಯಣ' — ಎಂದರೆ ಯಾವುದು ಸೂಕ್ಷ್ಮವಾದದ್ದೋ, ಬ್ರಹ್ಮಾಂಡವೋ ಅಥವಾ ಎಲ್ಲದಕ್ಕಿಂತ ಹೆಚ್ಚಾಗಿ ಕಣ್ಣೆದುರೇ ಇರುವ ಕ್ಷಣದಲ್ಲಿ, ವಾಸ್ತವದಲ್ಲಿ ಅವನು ಇದ್ದಾನೆ ಎಂದು. ಇದು ನನಗೆ ಬಹಳ ಇಷ್ಟ.

▸ **ನಿಮ್ಮ 'ಬಾಹುಬಲಿ' ಕವಿತಾ ಸಂಕಲನಕ್ಕೆ ಕನ್ನಡದ ಇನ್ನೊಬ್ಬ ಬಹಳ ದೊಡ್ಡ ಕವಿ ಪು.ತಿ.ನ. ಅವರು 'ಭಾವಗಳು ವಾಗರ್ಥಗಳ ಮೂಲಕವಾಗಿಯೇ ಸಹೃದಯರಿಗೆ ಮುಟ್ಟಬೇಕು' ಎಂದು ಬರೆದಿದ್ದರು. ನೀವು ಅಲ್ಲಿ ಕೋಟ್ ಮಾಡಿದ ಸಾಲುಗಳು ಮತ್ತೆ ಇಲ್ಲಿ ಪು.ತಿ.ನ. ಅವರು ನಿಮ್ಮ ಕವಿತೆಗಳ ಬಗ್ಗೆ ಬರೆದ ಸಾಲುಗಳಿಗೆ ಬಹಳ ಹತ್ತಿರದ ಸಂಬಂಧವಿದೆ ಎಂದು ಅನ್ನಿಸುತ್ತದೆ...**

ಕವಿತೆಯ ಬಗ್ಗೆ ಪು.ತಿ.ನ. ಅವರಿಗಿದ್ದಷ್ಟು ಸ್ಪಷ್ಟತೆ ಇನ್ಯಾರಿಗೂ ಇರಲಿಲ್ಲ. ಬಹುಶಃ ಅವರು 'ಭಾವ' ಎನ್ನುವುದು 'ವಿಷಯ' ಆಗಬೇಕು ಎನ್ನುತ್ತಿದ್ದರು. ಮನಸ್ಸಿನಲ್ಲಿ ಭಾವಗಳಿರುತ್ತವೆ, ಭಾವನೆಗಳಿರುತ್ತವೆ. ಆದರೆ, ಅದು ಕೈಗೆ ಸಿಕ್ಕುವಂತಹ, ನಮ್ಮ ಕರಣಗಳಿಗೆ ಸಿಕ್ಕುವಂತಹ ಇಂದ್ರಿಯ ಗ್ರಾಹ್ಯವಾದ ಪದಾರ್ಥ ಎನ್ನುವ ಹಾಗೆ ಆಗಬೇಕು. ಏಕೆಂದರೆ, ಬರೀ ಆಶಯವನ್ನ, ಬರೀ ಭಾವವನ್ನ ವ್ಯಕ್ತ ಪಡಿಸಿದಾಗ ಅದು ನಂಬಿಕೆಯ ಪ್ರಶ್ನೆಯಾಗುತ್ತದೆ. ನಾನು ಏನೋ ಹೇಳುತ್ತೇನೆ, ನನಗೆ ಬಹಳ ದುಃಖವಾಗಿದೆ ಅಂತ. ನೀವು ನನ್ನ ಸ್ನೇಹಿತರಾದರೆ ನಂಬುತ್ತೀರಿ. ಆದರೆ, ಅದು ಕವಿತೆಯ ಸಾಲಾಗೋದಿಲ್ಲ. ಈಗ 'ಸರ್ವೇಜನ ಸುಖೀನೋ ಭವಂತು' ಎನ್ನುತ್ತೇವೆ. ಸತ್ಯವನೇ ಹೇಳಬೇಕು ಎನ್ನುತ್ತೇವೆ. ಆಸೆಯೇ ದುಃಖಕ್ಕೆ ಕಾರಣ ಎನ್ನುತ್ತೇವೆ.